ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸಂಖ್ಯೆ: ಯುಸೇಇ/ರಾಸೇಯೋ/19/2021/2024-25/42

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 18.05.2024

ಇವರಿಗೆ,

ಕಾರ್ಯಕ್ರಮ ಸಂಯೋಜನಾಧಿಕಾರಿಗಳು,
ಎಲ್ಲಾ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳು.

ಮಾನ್ಯರೇ,

ವಿಷಯ: ಮುಟ್ಟಿನ ನೈರ್ಮಲ್ಯ ದಿನ/ವಾರ/ತಿಂಗಳ ಆಚರಿಸುವ ಕುರಿತು.

ಉಲ್ಲೇಖ: ಸೋನಿ ಅಬ್ರಹಾಂ, ಕಾರ್ಯನಿರ್ವಾಹಕ ಸಹಾಯಕರು, ಫೀಲ್ಡ್ ಆಫೀಸ್ ಮುಖ್ಯಸ್ಥರ ಕಚೇರಿ, ಆಂಧ್ರ ಪ್ರದೇಶ, ಕರ್ನಾಟಕ ಮತ್ತು ತೆಲಂಗಾಣದ UNICEF ಕ್ಷೇತ್ರ ಕಚೇರಿ, ಇವರ ಇಮೇಲ್ ಪತ್ರ: ದಿನಾಂಕ: 16.05.2024

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಹೆಣ್ಣುಮಕ್ಕಳ ಮತ್ತು ಮಹಿಳೆಯರ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ, ಮುಟ್ಟಿನ ನೈರ್ಮಲ್ಯ (MH) ಅತ್ಯಗತ್ಯವಾಗಿದ್ದು, ಸುಮಾರು 76% ರಷ್ಟು ಹೆಣ್ಣುಮಕ್ಕಳಲ್ಲಿ ತಮ್ಮ ಋತುಚಕ್ರದ ಮೊದಲು (ಹೆಣ್ಣುಮಕ್ಕಳ ಮೊದಲ ಮುಟ್ಟಿನ ಅವಧಿ) ಮುಟ್ಟಿನ ಬಗ್ಗೆ ಅರಿವಿರುವುದಿಲ್ಲ ಎಂದು ಅಂದಾಜಿಸಲಾಗಿದೆ. ಈ ಸಂಬಂಧ ಯುನಿಸೆಫ್ ಮುಟ್ಟಿನ ಆರೋಗ್ಯ ಮತ್ತು ನೈರ್ಮಲ್ಯದತ್ತ ಗಮನವನ್ನು ಹೆಚ್ಚಿಸಲು ಮಹತ್ವದ ಪಾತ್ರ ವಹಿಸುತ್ತಿದ್ದು, ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ಅದರಂತೆ, **ಪ್ರತಿ ವರ್ಷ ಮೇ 28 ರಂದು ಜಾಗತಿಕವಾಗಿ Menstrual Hygiene Day 2024 (MH) ದಿನವನ್ನು ಆಚರಿಸಲಾಗುತ್ತಿದ್ದು, ಈ ವರ್ಷದ ಧ್ಯೇಯವಾಕ್ಯವು "Together for a #PeriodFriendlyWorld" ಎಂಬುದಾಗಿದೆ. ಯುನಿಸೆಫ್ ಮುಟ್ಟಿನ ಆರೋಗ್ಯ ದಿನದಂದು ಮುಟ್ಟಿನ ನೈರ್ಮಲ್ಯ ನಿರ್ವಹಣೆಯನ್ನು ಸಂಯೋಜಿಸಲು MH ದಿನದ ಪ್ರಚಾರಗಳು ಮತ್ತು ಕಾರ್ಯಕ್ರಮಗಳನ್ನು ಆಯೋಜಿಸಲು ಕ್ರಮಗಳನ್ನು ಒದಗಿಸಿದೆ. (ಪ್ರತಿ ಲಗತ್ತಿಸಿದೆ).**

ಆದ್ದರಿಂದ, **ತಮ್ಮ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳು MH ದಿನ/ವಾರ/ತಿಂಗಳ ಆಚರಣೆಯನ್ನು ಹಮ್ಮಿಕೊಳ್ಳಲು ಹಾಗೂ ಕಾರ್ಯಕ್ರಮದ ವರದಿಯನ್ನು ಕೆಳಗೆ ನೀಡಲಾದ ಗೂಗಲ್ ಶೀಟ್‌ನಲ್ಲಿ ಮತ್ತು ಈ ಕಛೇರಿಗೆ ಸಲ್ಲಿಸುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತಮ್ಮ ಸಹಕಾರವನ್ನು ಕೋರಿದೆ.**

ಸೂಚನೆ:

- MH ದಿನ/ವಾರ/ತಿಂಗಳ ಆಚರಣೆಗೆ ಅನುಕೂಲವಾಗುವಂತೆ, ಮಾರ್ಗದರ್ಶನ ಟಿಪ್ಪಣಿಯನ್ನು https://bit.ly/44ubQZf ಗೂಗಲ್ ಲಿಂಕ್ ನಲ್ಲಿ ನೀಡಲಾಗಿದೆ. ಅದರಲ್ಲಿ Animation, Posters ಮತ್ತು Theater Slidesನ್ನು ನೀಡಲಾಗಿದ್ದು, ಇದನ್ನು ಸಾಮಾಜಿಕ ಜಾಲತಾಣದ ವಿವಿಧ ಪ್ಲಾಟ್‌ಫಾರ್ಮ್‌ಗಳಲ್ಲಿ ಸುಲಭವಾಗಿ ಹಂಚಿಕೊಳ್ಳಲು ಒದಗಿಸಲಾಗಿದೆ.

- MH ದಿನದ ವಾರ/ತಿಂಗಳ ಅವಧಿಯ ಕಾರ್ಯಕ್ರಮದ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳನ್ನು ವರದಿ ಮಾಡಲು https://bit.ly/4bqbxRk Google ಶೀಟ್ ಅನ್ನು ನೀಡಲಾಗಿದೆ.

ಹೆಚ್ಚಿನ ತಾಂತ್ರಿಕ ಸಹಾಯಕ್ಕಾಗಿ ಶ್ರೀ ವೆಂಕಟೇಶ್ ಅರಳಿಕಟ್ಟಿ, WASH Specialist (varalikatty@unicef.org) ಮತ್ತು ಶ್ರೀ ಕುಳಂದೈ ರಾಜ್, Social Behaviour Change Consultant, (krajO304@gmail.com) ಇವರನ್ನು ಸಂಪರ್ಕಿಸುವುದು

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ.ಪ್ರತಾಪ್ ಲಿಂಗಯ್ಯ)
ರಾಜ್ಯ ಎನ್.ಎಸ್.ಎಸ್.ಅಧಿಕಾರಿ,
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
2. ಎನ್.ಎಸ್. ಎಸ್. ಪ್ರಾದೇಶಿಕ ನಿರ್ದೇಶಕರು, ಎನ್. ಎಸ್.ಎಸ್. ಪ್ರಾದೇಶಿಕ ಕಛೇರಿ, ಭಾರತ ಸರ್ಕಾರ, ಬೆಂಗಳೂರು
3. ಸೋನಿ ಅಬ್ರಹಾಂ, ಕಾರ್ಯನಿರ್ವಾಹಕ ಸಹಾಯಕರು, ಫೀಲ್ಡ್ ಆಫೀಸ್ ಮುಖ್ಯಸ್ಥರ ಕಚೇರಿ, ಆಂಧ್ರ ಪ್ರದೇಶ, ಕರ್ನಾಟಕ ಮತ್ತು ತೆಲಂಗಾಣದ UNICEF ಕ್ಷೇತ್ರ ಕಚೇರಿ